ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ತಾವು ನಮ್ಮ ಪರವಾಗಿ ಮಾನ್ಯ ಸಚಿವರಿಗೆ ಈ ಸೂಚನೆ ನೀಡಿದ್ದಕ್ಕೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಆದಷ್ಟು ಬೇಗನೇ ತುರ್ತಾಗಿ ಸಭೆ ಕರೆಯಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

ಶ್ರೀ ಎಸ್. ಆರ್. ಕಾಶಪ್ಪನವರ್ : ನಾನು ತುರ್ತಾಗಿಯೇ ಆ ಸಭೆಯನ್ನು ಕರೆಯುತ್ತೇನೆ.

ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ವಿಶೇಷ ಮಾರುಕಟ್ಟೆ ಸೌಲಭ್ಯ

104 (862) ಶ್ರೀ ಮೋಹನ್ ಪಿ.ಪಿ. (ಚಿಕ್ಕಪೇಟೆ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ವಿಶೇಷ ಮಾರುಕಟ್ಟೆ ನೆರವು ನೀಡಿ ನಿಗಮವನ್ನು ಆರ್ಥಿಕವಾಗಿ ಬಲಪಡಿಸುವ ಬಗ್ಗೆ ಸರ್ಕಾರದ ನಿಲುವೇನು?

ಆ) ರಾಜ್ಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದ ಆಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರು ಕೈಮಗ್ಗಗಳ ಸಂಖ್ಯೆ ಎಷ್ಟು?

ಇ) ಈ ಮಗ್ಗಗಳಿಗೆ ಅಗತ್ಯವಿರುವ ನೂಲಿನ ಬೀಮುಗಳು ತಯಾರಾಗುತ್ತಿವೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಈ) ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಕೈಮಗ್ಗ ಅಭಿವೃದ್ಧಿ ನಿಗಮದಿಂದಲೇ ಬಟ್ಟೆ ಖರೀದಿಸುವಂತೆ ಆದೇಶ ಹೊರಡಿಸುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಮಹದೇವ್ (ರೇಷ್ಮೆ ಹಾಗೂ ಜವಳಿ ಸಚಿವರು) :

ಅ) ಈಗಾಗಲೇ ಸರ್ಕಾರವು ನಿಗಮಕ್ಕೆ ವಿಶೇಷ ಮಾರುಕಟ್ಟೆ ನೆರವು ಹಾಗೂ ಚಿಲ್ಲರೆ ಮಾರಾಟದ ಮೇಲೆ ವಿಶೇಷ ರಿಯಾಯಿತಿ ನೀಡುವಿಕೆ ಮುಂತಾದ ಕಾರ್ಯಕ್ರಮಗಳ ಮೂಲಕ ನಿಗಮವನ್ನು ಆರ್ಥಿಕವಾಗಿ ಬಲಪಡಿಸುವ ನಿಲುವುವನ್ನು ತಾಳಿದೆ.

ಆ) 17,000

ಇ) ತಯಾರಾಗುತ್ತಿವೆ.

ಈ) ಸರ್ಕಾರಿ ಸುತ್ತೋಲೆ ದಿನಾಂಕ 13-07-1998ರ ಪ್ರಕಾರ ಕೆಹೆಚ್‌ಡಿಸಿ ಸೇರಿದಂತೆ ಐದು ಸಂಸ್ಥೆಗಳಿಂದ ಬಟ್ಟೆಯನ್ನು ಖರೀದಿಸಲು ಆದೇಶ ನೀಡಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕಾರ ಸರ್ಕಾರಿ ಇಲಾಖೆಗಳು ಸಂಸ್ಥೆಗಳು ಸದರಿ ಅಧಿನಿಯಮದಲ್ಲಿ ಇದ್ದಂತೆ ಸರಕು ಸೇವೆಗಳನ್ನು ಪಡೆದುಕೊಳ್ಳಬೇಕಾಗಿರುತ್ತದೆ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೇ, ಮಗ್ಗಗಳಿಗೆ ಅಗತ್ಯವಿರುವ ನೂಲಿನ ಬೀಮುಗಳು ತಯಾರಾಗುತ್ತಿವೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಮಾನ್ಯ ಸಚಿವರು ದಯವಿಟ್ಟು ಅವು ಎಲ್ಲೆಲ್ಲಿ ತಯಾರಾಗುತ್ತಿವೆ ಎಂಬುದನ್ನು ತಿಳಿಸಬೇಕು. ಈ ರೀತಿ ತಯಾರಾಗುತ್ತಿರುವ ನೂಲಿನ ಬೀಮುಗಳು, ಮಗ್ಗಗಳಿಗೆ ಅಗತ್ಯವಾದಷ್ಟು ಪ್ರಮಾಣದಲ್ಲಿ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ಮಹದೇವ್ : ಸನ್ಮಾನ್ಯ ಅಧ್ಯಕ್ಷರೇ, ಕೆ.ಹೆಚ್.ಡಿ.ಸಿ.ಯಲ್ಲಿ ಸುಮಾರು 17 ಸಾವಿರ ವರ್ಕರ್ಸ್ ಇದ್ದಾರೆ. ಅದೊಂದು ಆನ್-ಆರ್ಗನೈಸ್ಡ್ ಸೆಕ್ಟಾರ್ ಆಗಿದೆ. ಅವರಿಗೆ ನೂಲು ಮತ್ತು ಪೇಮೆಂಟ್ ಅನ್ನು ಸರ್ಕಾರದ ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಕೊಡುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ ಈ ವ್ಯವಸ್ಥೆ ಇದೆ. ತಮಿಳುನಾಡು ಮತ್ತು ಇತರ ಬೇರೆ ರಾಜ್ಯಗಳಲ್ಲಿ ಸೊಸೈಟಿ ಮುಖೇನ ಮಾಡತಕ್ಕ ವ್ಯವಸ್ಥೆ ಇದೆ. ಇಲ್ಲೂ ಹಾಗೇ ಮಾಡಲು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಕೆ.ಹೆಚ್.ಡಿ.ಸಿ. ವೀವರ್ಸ್ ಯಾರಿದ್ದಾರೆ ಅವರುಗಳು ಸೊಸೈಟಿಗಳನ್ನು ಮಾಡಿಕೊಂಡರೆ ಅವರಿಗೆ ಈ ಜವಾಬ್ದಾರಿಯನ್ನು ಕೊಡಬೇಕೆಂಬ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ವಿದ್ಯಾ ವಿಕಾಸ ಯೋಜನೆಯನ್ನು ಇಂಡಿವಿಜುಯಲ್‌ಗಳ ಮೂಲಕ ಅನುಷ್ಠಾನ ಮಾಡುವುದಕ್ಕಿಂತ ಗುಣಮಟ್ಟದ ದೃಷ್ಟಿಯಿಂದ, ಅವರ ಉತ್ಪನ್ನದ ಹಿತದೃಷ್ಟಿಯಿಂದ ಮತ್ತು ಜವಾಬ್ದಾರಿಯುತವಾಗಿ ಮಾಡಬೇಕೆಂಬ ಹಿತ ದೃಷ್ಟಿಯಿಂದ ಸಹಕಾರ ಸಂಘಗಳ ಮುಖೇನ ಮಾಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ವಿದ್ಯಾ ವಿಕಾಸ ಯೋಜನೆ ಅಡಿ ನೇಯಲಾಗುವ ಬಟ್ಟೆಗೆ ಶಿಕ್ಷಣ ಇಲಾಖೆಯಿಂದ ಹಣ ಕೊಡಲಾಗುತ್ತದೆ ಎಂದು ಹೇಳಿದ್ದಾರೆ. ಬಹುಶ: ಮಾನ್ಯ ಮಹದೇವ್ ಮತ್ತು ವಿಶ್ವನಾಥ್‌ರವರ ನಡುವಿನ ಈ ವಿಷಯದ ಬಗೆಗಿನ ಜಗಳ ಇನ್ನೂ ಬಗೆಹರಿಸಿಲ್ಲವೆಂದು ವರದಿಯಾಗಿದೆ. ಆದುದರಿಂದ ಅದರ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಸ್ಪಷ್ಟೀಕರಣ ನೀಡಬೇಕು;

12.40 ಪಿ.ಎಂ.

ಇವತ್ತು ನೇಕಾರರಿಗೆ ಸರಿಯಾಗಿ ನೂಲು ಸಿಗುತ್ತಿಲ್ಲ. ಜಮಖಂಡಿ ಮತ್ತು ರಬಕವಿಯಲ್ಲಿ ಇಬ್ಬರು ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕಡೆ ರೈತರ ಆತ್ಮಹತ್ಯೆ, ಈ ಕಡೆ ನೇಕಾರರ ಆತ್ಮ ಹತ್ಯೆ. ಇದರ ಬಗ್ಗೆ ಸರ್ಕಾರ ದಯವಿಟ್ಟು ಗಮನ ಹರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ಬಜೆಟ್‌ನಲ್ಲಿ ಪ್ರಾಮಿಸ್ ಮಾಡಿದರು ಜನಳಿ ಆಯುಕ್ತರ ಕಛೇರಿ ಇದುವರೆಗೆ ಹುಬ್ಬಳ್ಳಿಗೆ ಬಂದಿಲ್ಲ. ಇಲ್ಲಿದ್ದಂತಹ ಪರ್ಚೇಸ್ ಸೆಕ್ಷನ್ ಅನ್ನು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಶಿಫ್ಟ್ ಮಾಡಿದ್ದೀರಿ ಇದು ಏಕೆ? ಮಹದೇವ ಜವಳಿ ಗಿರಣಿಗೆ ಮೂರು ಕೋಟಿ ರೂಪಾಯಿ ಪರಿಹಾರ ಧನ ಕೊಡುತ್ತೇವೆಂದು ಹೇಳಿ ಮೂರು ತಿಂಗಳಾಯಿತು. ಇದುವರೆಗೆ ಪರಿಹಾರಧನ ಬರಲಿಲ್ಲ. ಇದರ ಬಗ್ಗೆ ಉತ್ತರ ಕೊಡಿ.

ಶ್ರೀ ಮಹದೇವ್ .ಎಂ : ಸಚಿವರಾದ ಶ್ರೀ ವಿಶ್ವನಾಥ್‌ರವರು ಮತ್ತು ನಾವೂ ಇಬ್ಬರೂ ಅನ್ಯೋನ್ಯವಾಗಿದ್ದೇವೆ. ನಾವಿಬ್ಬರೂ ಸ್ನೇಹಿತರು. ಇದರಲ್ಲಿ ಯಾವುದೇ ತರಹದ ಅನುಮಾನ ಬೇಡ. ನಾವು ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದೇವೆ. ಜವಳಿ ನೇಕಾರರ ಆಯುಕ್ತರ ಕಛೇರಿ ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದಾರೆ ಅದನ್ನು ಶಿಫ್ಟ್ ಮಾಡಿಲ್ಲವೆಂದು ಹೇಳಿದ್ದೀರಿ. ಮುಖ್ಯ ಮಂತ್ರಿಗಳು ಆದೇಶ ಕೊಟ್ಟಿದ್ದಾರೆ. ಜವಳಿ ಆಯುಕ್ತರ ಕಛೇರಿ ಅಲ್ಲಿಗತ ಶಿಫ್ಟ್ ಮಾಡಿದ್ದೇವೆ. ಮತ್ತು ಬೇರೆ ಬೇರೆ ಆಡಳಿತದ ದೃಷ್ಟಿಯಿಂದ ಕೆಲವು ಅಧಿಕಾರಿಗಳನ್ನು ಇಲ್ಲಿಗೆ ತೆಗೆದುಕೊಂಡಿದ್ದೇವೆ. ಪರ್ಚೇಸ್ ವಿಭಾಗವನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದೀರಿ ಎಂದು ಹೇಳಿದರು, ಆ ತರಹ ಮಾಡುವುದಕ್ಕೆ ನಮಗೆ ಅವಶ್ಯಕತೆ ಇಲ್ಲ. ಜೂನ್ ತಿಂಗಳಲ್ಲಿ ವಿದ್ಯಾ ವಿಕಾಶ ಯೋಜನೆಯಲ್ಲಿ

ನಾವು ಒಪ್ಪಿಕೊಂಡಿರುವ ಬಟ್ಟೆಗಳನ್ನು ಸರಬರಾಜು ಮಾಡಬೇಕೆನ್ನುವ ಉದ್ದೇಶದಿಂದ ಕೆಲವು ಅಧಿಕಾರಿಗಳನ್ನು ಇಲ್ಲಿಗೆ ಕರೆಸಿಕೊಂಡಿದ್ದೇವೆ ನಿಜ. ಮೂರು ತಿಂಗಳಲ್ಲಿ ಇದನ್ನು ಕೊಡಬೇಕಾಗಿರುವುದರಿಂದ, ನಮಗೆ ವೇಳೆ ಬಹಳ ಕಡಿಮೆ ಇರುವುದರಿಂದ ಅವರ ಜೊತೆ ಸಮಾಲೋಚನೆ ಮಾಡಿ ಸೆಂಟರ್‌ಗಳಿಗೆ ಬಟ್ಟೆಗಳನ್ನು ಕಳಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಪರ್ಚೇಸ್ ವಿಭಾಗವನ್ನು ಹುಬ್ಬಳ್ಳಿಯಲ್ಲಿ ನಾವು ಇಡುತ್ತೇವೆ. ಮೂರನೇ ಪ್ರಶ್ನೆ ಮಹದೇವ ಟೆಕ್ಸ್‌ಟೈಲ್ ಮಿಲ್ಲಿನ ಬಗ್ಗೆ ನೀವು ಪರಿಹಾರ ಕೊಡುವುದನ್ನು ಏನು ಮಾಡಿದ್ದೀರಿ ಎಂದು ಹೇಳಿದ್ದೀರಿ, ಮಹದೇವ ಟೆಕ್ಸ್‌ಟೈಲ್ ಮಿಲ್ ಮತ್ತೆ ಪುನರಾರಂಭ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಅಲ್ಲಿಯ ನೌಕರರಿಗೆ ಪರಿಹಾರ ಕೊಡಬೇಕೆಂದು ಅವರು ನಮಗೆ ಮನವಿ ಕೊಟ್ಟಿದ್ದಾರೆ. ತಾವು ಸಹ ಸರ್ಕಾರದ ಗಮನ ಸೆಳೆದಿದ್ದೀರಿ. ಅದಕ್ಕೆ ಮೂರು ಕೋಟಿ ರೂಪಾಯಿಗಳಷ್ಟು ತಾತ್ಕಾಲಿಕ ಪರಿಹಾರ ಕೊಡಬೇಕಾಗಿದೆ. ಆ ಪರಿಹಾರ ಹಣವನ್ನು ಸರ್ಕಾರ ಅವರ ಆಸ್ತಿ ಮೇಲೆ ವಿಲೇ ಆಗುವುದಕ್ಕೆ ಮುಂಚೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದಾರೆ, ಹಣಕಾಸು ಇಲಾಖೆಯಲ್ಲಿ ಆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಅದು ಬಂದ ಕೂಡಲೆ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಬಂದು ಮಂಜೂರಾತಿ ಮಾಡಿಸಿಕೊಂಡು ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಹದೇವ ಜವಳಿ ಗಿರಣಿ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಿ 15 ಜನ ಸತ್ತಿದ್ದಾರೆ.

ಶ್ರೀ ಎಂ. ಮಹದೇವ್ : ನಮ್ಮ ಇಲಾಖೆಯಿಂದ ಆ ಪ್ರಸ್ತಾವನತಎನ್ನು ಹಣಕಾಸು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅವರು ಪರಿಶೀಲನೆ ಮಾಡುತ್ತಿದ್ದಾರೆ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆಯಾಗಿ ಅದಕ್ಕೆ ಮಂಜೂರಾತಿ ಒಪ್ಪಿಗೆ ಕೊಡುವುದಕ್ಕಾಗಿ ಕ್ಯಾಬಿನೆಟ್ ಮುಂದೆ ತರುವಂತೆ ಹೇಳಿದ್ದೇವೆ, ಆದಷ್ಟು ಜಾಗ್ರತೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇವೆ.

ಔರಾದ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ

105 (1163) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 20 ಸಾವಿರ ಜನಸಂಖ್ಯೆ ಇರುವ ಔರಾದ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಗರದಿಂದ ಕೇವಲ 6.0 ಕಿ.ಮೀ. ದೂರದಲ್ಲಿರುವ ''ತೆಂಗಂಪೂರ'' ಸಣ್ಣ ನೀರಾವರಿ ಕೆರೆ ಕೆಳಗೆ ಬಾವಿ ತೋಡಿ ನೀರು ಸರಬರಾಜು ಮಾಡುವ ಯೋಜನೆ ಯಾವ ಹಂತದಲ್ಲಿದೆ?

ಇ) ಯೋಜನೆಯನ್ನು ಈ ವರ್ಷದ ಆಯವ್ಯಯದಲ್ಲಿ ಅಳವಡಿಸಲಾಗಿದೆಯೇ ಇಲ್ಲದಿದ್ದರೆ ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಬಂದಿದೆ